**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालय:**

श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

ಕಸಂವಿ/ ಪ್ರಾ.ಸ./ 2014–15 ದಿನಾಂಕ: 19.02.2015

# ಕಛೇರಿ ಜ್ಞಾಪನಾ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ದಿನಾಂಕ: 25.02.2015ರಂದು ಬೆಳಿಗ್ಗೆ 11.00 ರಿಂದ ಸಂಜೆ 5.00 ರವರೆಗೆ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ಸಭಾಂಗಣದಲ್ಲಿ ಪ್ರಾಚಾರ್ಯರ ಸಭೆಯನ್ನು ಕರೆಯಲಾಗಿದೆ. ಅಂದು ಆಡಳಿತಾತ್ಮಕ. ಆರ್ಥಿಕ, ಶೈಕ್ಷಣಿಕ ಮತ್ತು ಪರೀಕ್ಷಾ ವಿಷಯಗಳ ಬಗ್ಗೆ ಮಾಹಿತಿ ಕೊಡುವುದರ ಜೊತೆಗೆ ಮಧ್ಯಾಹ್ನ ಶೈಕ್ಷಣಿಕ ವಿಚಾರಗೋಷ್ಠಿಯನ್ನು ಏರ್ಪಡಿಸಲಾಗಿದೆ. ತಾವು ಯಾವ ಪ್ರತಿನಿಧಿಯನ್ನೂ ಕಳುಹಿಸದೇ ಖುದ್ದಾಗಿ ಹಾಜರಿರಬೇಕಾಗಿ ಆದೇಶಿಸಲಾಗಿದೆ. ಈ ಪತ್ರದೊಂದಿಗೆ ಸಭೆಯ ಸೂಚಿಪತ್ರವನ್ನು ಲಗತ್ತಿಸಲಾಗಿದೆ ಹಾಗೂ ಈ ಕೆಳಕಂಡ ಮಾಹಿತಿಯನ್ನು ಕಡ್ಡಾಯವಾಗಿ ತರಲು ಆದೇಶಿಸಿದೆ.

**s/d**

**ಕುಲಸಚಿವರು**

**ಪ್ರತಿಗಳು:**

1. **ಮಾನ್ಯ ಕುಲಪತಿಗಳು, ಕಸಂವಿ, ಬೆಂಗಳೂರು**
2. **ಕುಲಪತಿಗಳ ಆಪ್ತಶಾಖೆ**
3. **ಅಧ್ಯಕ್ಷರು, ಅಧ್ಯಯನಾಂಗ**
4. **ಉಪನಿಯಂತ್ರಕರು, ಪರೀಕ್ಷಾಂಗ**
5. **ಹಣಕಾಸು ಅಧಿಕಾರಿಗಳು**

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

KARNATAKA SAMSKRIT UNIVERSITY

**कर्नाटक–संस्कृत–विश्वविद्यालयः**

श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

**ಸಭೆಯಲ್ಲಿ ಚರ್ಚಿಸಲಿರುವ ಅಂಶಗಳು:**

1. ಕಾಲೇಜು ವಿದ್ವನ್ಮಧ್ಯಮಾ ವಿದ್ವದುತ್ತಮಾ ತರಗತಿಗೆ ಸೇರಿದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ, ಗಂಡು ಹೆಣ್ಣು, ಜಾತಿವಾರು (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಪ್ರವರ್ಗ–1, II A, II B, III A, III B) ಮುಂತಾದ ಒಟ್ಟು ವಿವರ.
2. 2013ರ ನಂತರ ದಾಖಲಾತಿ ಮಾಡಿಕೊಂಡಿರುವ ಗುಲ್ಬರ್ಗಾ. ಯಾದಗಿರಿ, ರಾಯಚೂರು, ಬಳ್ಳಾರಿ ಜಿಲ್ಲೆಗಳ ವಿದ್ಯಾರ್ಥಿಗಳ ವಿವರ.
3. NAAC ಮಾನ್ಯತೆಗೆ ಸಂಬಂಧಿಸಿದಂತೆ ಸಿದ್ಧತೆಗಳನ್ನು ಮಾಡಿಕೊಂಡಿರುವ ಬಗ್ಗೆ.
4. ನಿಮ್ಮ ಕಾಲೇಜು ಆವರಣದಲ್ಲಿ ಗಿಡನೆಡುವಿಕೆ/ ಮಳೆಕೊಯ್ಲು ಸಂಗ್ರಹಕ್ಕೆ ಮಾಡಿಕೊಂಡಿರುವ ವ್ಯವಸ್ಥೆ.
5. ಕಾಲೇಜುಗಳಲ್ಲಿ ಸೌರವಿದ್ಯುತ್ ಮತ್ತು LED ದೀಪಗಳ ಅಳವಡಿಕೆ ವ್ಯವಸ್ಥೆ.
6. ನಿಮ್ಮ ಕಾಲೇಜುಗಳಲ್ಲಿ ಹಳೆಯ ವಿದ್ಯಾರ್ಥಿಗಳ ಸಂಘ ಸ್ಥಾಪಿಸಿದ ಬಗ್ಗೆ ಮತ್ತು ಚಟುವಟಿಕೆಗಳ ಬಗ್ಗೆ ವರದಿ.
7. ಏಕಕಾಲದಲ್ಲಿ ವ್ಯಾಸಂಗ ಮತ್ತು ಕೆಲಸ ಮಾಡುತ್ತಿರುವ ನಕಲಿ ವಿದ್ಯಾರ್ಥಿಗಳ ಪಟ್ಟಿ.
8. ವಾರಕ್ಕೊಂದು ಬಾರಿ ವಿದ್ಯಾರ್ಥಿಗಳಿಂದ ಬೋಧನೆ, ಉಪನ್ಯಾಸಗಳ ಬಗ್ಗೆ ಮಾಹಿತಿ ಪಡೆದುಕೊಳ್ಳುವುದು.(Feedback Questionaire)
9. ಯೋಗ ಮತ್ತು ಪ್ರಕೃತಿ ಚಿಕಿತ್ಸೆ ತರಗತಿಗಳ ಪ್ರಾರಂಭ.
10. ಗ್ರಾಮೀಣ ವಿದ್ಯಾರ್ಥಿಗಳಿಗೆ ಭಾಷಾ ಪ್ರಯೋಗಾಲಯ ಮತ್ತು ಸಾಮಾನ್ಯ ಇಂಗ್ಲೀಷ್ ಸಂವಹನ ಕೌಶಲ ತರಗತಿಗಳು.
11. ಪ್ರತಿದಿನ ನಾಡಗೀತೆಯೊಂದಿಗೆ ತರಗತಿಗಳ ಪ್ರಾರಂಭ.
12. Raging ತಡೆಗೆ ಕೈಗೊಂಡಿರುವ ಕ್ರಮಗಳು. Anti-Raging ಸಮಿತಿ.
13. ಮಹಿಳಾ ದೌರ್ಜನ್ಯ ತಡೆಗೆ ಕೈಗೊಂಡಿರುವ ಕ್ರಮಗಳು.
14. ವಿದ್ಯಾರ್ಥಿ/ಪೋಷಕ ಸಭೆ ನಡೆಸಿದ ಬಗ್ಗೆ ಮಾಹಿತಿ.
15. ವಿದ್ಯಾಭ್ಯಾಸದಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಉತ್ತೇಜನಕ್ಕೆ ಕೈಗೊಂಡಿರುವ ಕ್ರಮಗಳು.
16. ಈ ವರ್ಷದಲ್ಲಿ ಕೈಗೊಂಡ ವಾರ್ಷಿಕ ಶೈಕ್ಷಣಿಕ ಚಟುವಟಗಳ ಬಗ್ಗೆ,
17. ಪರೀಕ್ಷಾ ಅರ್ಜಿ ನೋಂದಣಿ ( ಛಾಯಾಚಿತ್ರ ಸಮೇತ)
18. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರ ವಿಷಯಗಳು.